14) ರಾತ್ರಿ ವೇಳೆ ಪ್ರಯಾಣಿಸುವ ಪ್ರಯಾಣಿಕರಿಗೆ ಅವರ ಪ್ರಾಣ ಮತ್ತು ಆಸ್ತಿಪಾಸ್ತಿಗಳಿಗೆ ರಕ್ಷಣೆ ನೀಡಲು ಹಾಗೂ ರಾತ್ರಿ ವೇಳೆ ಸಂಚರಿಸುವ ಸರಕು ವಾಹನಗಳಿಗೆ ಸೂಕ್ತ ರಕ್ಷಣೆ ನೀಡಲು ರಸ್ತೆ ಮೇಲೆ ಹೆಚ್ಚಿನ ಗಸ್ತನ್ನು ಏರ್ಪಡಿಸಲಾಗಿದೆ.

ವಿಷಯ: ಸರ್ಕಾರದ ಇಲಾಖೆಗಳಲ್ಲಿ ಖಾಲಿ ಇರುವ IIIನೇ ದರ್ಜೆ ಹುದ್ದೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ : 1607(2113)

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಖಾಲಿ ಇರುವ IIIನೇ ದರ್ಜೆ ಹುದ್ದೆಗಳ ಸಂಖ್ಯೆ;

ಆ) ಖಾಲಿ ಇರುವ ಈ ಹುದ್ದೆಗಳಿಂದ ಉಂಟಾಗುತ್ತಿರುವ ಪರಿಸ್ಥಿತಿಯನ್ನು ಎದುರಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳು.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು):-

ಅ)ಸಚಿವಾಲಯದ ವಿವಿಧ ಇಲಾಖೆಗಳಲ್ಲಿ 554 'ಸಿ' ಗುಂಪಿನ ಹುದ್ದೆಗಳು.

ಆ) ಅವಶ್ಯವಿರುವ ಪ್ರಕರಣಗಳಲ್ಲಿ ಆರ್ಥಿಕ ಮಿತವ್ಯಯವನ್ನು ಸಡಿಲಿಸಿ ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ವಿಷಯ: ಮದ್ದೂರು ತಾಲ್ಲೂಕಿನಲ್ಲಿ ಕೆರೆಯ ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1608 (1908)

ಶ್ರೀ ಕೆ.ಎನ್.ನಾಗೇಗೌಡ (ಕಿರುಗಾವಲು):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಯಾಲದಹಳ್ಳಿ ಕೆರೆ ಸುಜ್ಜಲೂರು ಕಡಿವಾಗಿಲು ಕೆರೆಗಳನ್ನು ಯಾವಾಗ ಮಂಜೂರು ಮಾಡಲಾಯಿತು (ಮಳವಳ್ಳಿ ತಾಲ್ಲೂಕು)

ಆ) ಹಾಗಿದ್ದಲ್ಲಿ ಈ ಮೂರು ಕೆಲಸಗಳು ಯಾವ ಹಂತದಲ್ಲಿರುತ್ತವೆ?

ಇ) ಇಷ್ಟು ತಡವಾಗಲು ಕಾರಣಗಳೇನು?

ಈ) ಯಾವಾಗ ಮುಗಿಸಲಾಗುವುದು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು):

ಅ)ಅ) ಯಾಲದಹಳ್ಳಿ ಕೆರೆ ಸುಧಾರಣೆ ಕೆಲಸಗಳು 1994-95 ರಲ್ಲಿ ರೂ. 8.38 ಲಕ್ಷಕ್ಕೆ ಮಂಜೂರು ಮಾಡಲಾಗಿದೆ.

ಆ) ಸುಜ್ಜಲೂರು ಕೆರೆ ಸುಧಾರಣೆ ಕೆಲಸಗಳು 1993-94 ರಲ್ಲಿ ರೂ. 16.30 ಲಕ್ಷಕ್ಕೆ ಮಂಜೂರು ಮಾಡಲಾಗಿದೆ.

ಇ) ಕಡಿವಾಗಿಲು ಕೆರೆ ಸುಧಾರಣೆ ಕೆಲಸಗಳು 1993-94 ರಲ್ಲಿ ರೂ.2.35 ಲಕ್ಷಕ್ಕೆ ಮಂಜೂರು ಮಾಡಲಾಗಿದೆ.

ಆ)ಅ) ಯಾಲದಹಳ್ಳಿ ಕೆರೆ: ಎರಡು ಟೆಂಡರ್ ಕರೆಗಳು ನರರ್ಥಕವಾದುದರಿಂದ ಇಲಾಖಾ ನಿಯಮಗಳ ರೀತ್ಯಾ ನೇರವಾಗಿ ಗುತ್ತಿಗೆದಾರರಿಗೆ ಕೆಲಸ ವಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.